ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:1255/2016

ಪ್ರಾಸಾ:11
ದಿನಾಂಕ: 16.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಮೇಶ |
| ತಂದೆಯ ಹೆಸರು | : | ಗೋವಿಂದ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಮರವಂತೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯ ಪರಿಚಯವಿದೆ. ಸಾಕ್ಷಿಗೆ ನಿಪಿ-9ರ ಸ್ವತ್ತು ಸ್ವಾಧೀನತಾ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ದಿ: 06-07-2015 ರಂದು ನಾನು ಮತ್ತು ಪ್ರಾಸಾ-10 ರವರು ಠಾಣೆಗೆ ಹಾಜರಾಗಿದ್ದು, ಆರೋಪಿಯನ್ನು ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಬಂಧಿಸಿದ್ದು ಆತನ ಮೊಬೈಲನ್ನು ಗಂಗೊಳ್ಳಿ ಠಾಣೆಯಲ್ಲಿ ವಶಕ್ಕೆ ಪಡೆಯುವ ವೇಳೆಗೆ ನಾನು ಹಾಜರು ಇದ್ದು ರಾತ್ರಿ 8-00 ರಿಂದ 8-30 ಗಂಟೆಯವರೆಗೆ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಅದು ಸ್ಯಾಂಸಂಗ್ ಮೊಬೈಲ್ ಇರಬಹುದು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಸ್ಯಾಂಸಂಗ್ ಮೊಬೈಲನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ1 ಎಂದು, ಮೊಹರಿನ ಚೀಟಿಯಲ್ಲಿ ಇರುವ ಸಾಕ್ಷಿ ಸಹಿಯನ್ನು ಮುಮಾ1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ:**

ನಾನು ರಿಕ್ಷಾ ಚಾಲಕ. ಆರೋಪಿ ನನ್ನ ಹೆಂಡತಿಯ ತಂಗಿ ಗಂಡ. ಪ್ರಾಸಾ-10 ಮತ್ತೊಂದು ತಂಗಿಯ ಗಂಡ. ಆರೋಪಿ ಮತ್ತು ಆತನ ಹೆಂಡತಿಯೊಂದಿಗೆ ಅನೋನ್ಯತೆ ಇಲ್ಲ ಎಂದರೆ ನನಗೆ ತಿಳಿದಿಲ್ಲ. ನಾನು ಸಹಿ ಮಾಡಿದ ದಾಖಲೆಗೆ ಸಂಬಂಧಿಸಿದ ಪ್ರಕರಣ ಯಾವುದೆಂದು ನನಗೆ ತಿಳಿದಿಲ್ಲ. ನಮ್ಮ ಮನೆ ಮರವಂತೆಯಲ್ಲಿದೆ. ನಾನು ಮತ್ತು ಪ್ರಾಸಾ-10 ರವರು ಒಟ್ಟಾಗಿ ಠಾಣೆಗೆ ಹೋಗಿರುತ್ತೇವೆ. ನನ್ನನ್ನು ಆತ ಕರೆದುಕೊಂಡು ಹೋಗಿರುತ್ತಾರೆ. ನಾವು ಹೋದಾಗ

ಮುಮಾ1ನ್ನು ಪೊಲೀಸರು ಎಲ್ಲಿ ಇಟ್ಟಿದ್ದರು ಎಂದು ನೋಡಲಿಲ್ಲ. ನನ್ನ ಎದುರಿಗೆ ಅದನ್ನು ಆನ್ ಮಾಡಿ ನೋಡಲಿಲ್ಲ. ಆದ್ದರಿಂದ ಅದರ ಒಳಗೆ ಏನಿದೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ಪ್ರಕರಣಕ್ಕೂ ಸದ್ರಿ ಮೊಬೈಲಿಗೂ ಏನು ಸಂಬಂಧ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ಠಾಣೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರೂ ಇರಲಿಲ್ಲ ಅವರು ಯಾರು ಎಂದು ನನಗೆ ತಿಳಿದಿಲ್ಲ.

ನಾನು ಒಂದು ಸಹಿ ಮಾಡಿರುತ್ತೇನೆ. ದಾಖಲೆಯಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ತಿಳಿದಿಲ್ಲ. ಪ್ರಾಸಾ-10 ರವರು ಸೂಚಿಸಿದಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**